ದಿನಾಂಕಃ 06.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ

6. 2 ನೇ ಖರೀದಿ ಕರಾರು ಪತ್ರದಲ್ಲಿ ಬೀರಪ್ಪನವರು ರೂ.1,20,000/- ಗಳನ್ನು ಬರೆಸಿದ್ದರು. ಈ ರೀತಿ ನಾನೇ ಬರೆಸಿದ್ದು ಅದು ಬೀರಪ್ಪನವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಬೀರಪ್ಪನವರಿಗೆ ಖರೀದಿ ಪತ್ರ ಬರೆದುಕೊಡಿ ಎಂದು ಯಾವಾಗ ಕೇಳಿದ್ದೀರಿ ಎಂದರೆ ಸಾಕ್ಷಿ ನಾನು ಕೇಳುತ್ತಾ ಬಂದಿದ್ದು ಅವರು ಬರೆದುಕೊಡುತ್ತೇನೆ ಅನ್ನುತ್ತಾ ಬಂದಿದ್ದರು ಎನ್ನುತ್ತಾರೆ. ದಾವೆಯನ್ನು ಯಾವಾಗ ದಾಖಲಿಸಿದ್ದೀರಿ ಎಂದರೆ ಸಾಕ್ಷಿ ಕಾಲಾವಧಿ ಮುಗಿಯುತ್ತಾ ಇದ್ದಾಗ ಹಾಕಿದ್ದೇನೆ ಎನ್ನುತ್ತಾರೆ. ಯಾವ ದಿನಾಂಕದಂದು ಕಾಲಾವಧಿ ಮುಗಿದಿದೆ ಎಂದು ನನಗೆ ಗೊತ್ತಿಲ್ಲ. 16.02.2018 ರಂದು ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ. ದಾವೆ ಸಲ್ಲಿಸಲು ಕಾಲಾವಧಿಯನ್ನು ಏಕೆ ತೆಗೆದುಕೊಂಡಿದ್ದೀರಿ ಎಂದರೆ ಸಾಕಿ ಇಂದು ಬರೆದುಕೊಡುತ್ತೇನೆ ನಾಳೆ ಬರೆದುಕೊಡುತ್ತೇನೆ ಎಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ.

7. ಮೊದಲನೆ ಕರಾರು ಪತ್ರ ದ ಅವಧಿ ಮುಗಿದ ತಕ್ಷಣ ಬೀರಪ್ಪ 4 ಲಕ್ಷ ಹಣವನ್ನು ನನಗೆ ಹಿಂದಿರುಗಿಸಿದ್ದು ನಾನು ಅದನ್ನು ರದ್ದುಪಡಿಸುತ್ತೇನೆ ಎಂದು ಬೀರಪ್ಪನಿಗೆ ಹೇಳಿ ಈ ದಾವೆಯ ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಕರಾರನ್ನು ಬರೆಸಿಕೊಂಡಿರುವ ಬಗ್ಗೆ ಬೀರಪ್ಪನಿಗೆ ಗೊತ್ತಿಲ್ಲ. ಅವರ ಜಮೀನನ್ನು ಒಡೆದುಕೊಳ್ಳುವ ಉದ್ದೇಶದಿಂದ ಈ ಕರಾರನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಇದೇ ರೀತಿ ಬೀರಪ್ಪನ ತಮ್ಮ ಬಸಪ್ಪರವರಿಂದ ಒಂದು ಖರೀದಿ ಕರಾರು ಪತ್ರವನ್ನು ನಾನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪ ನನ್ನ ಜೊತೆ ಜಗಳ ಆಡಿ ಹಣವನ್ನು ಹಿಂದಿರುಗಿಸಿ ಕರಾರು ಪತ್ರವನ್ನು ರದ್ದು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಸಾಮಾನ್ಯವಾಗಿ ಊರಲ್ಲಿ ಬಡ್ಡಿ ವೆವಹಾರ ಮಾಡುತ್ತಿದ್ದು, ಕೊಟ್ಟ ಸಾಲಕ್ಕೆ ಖಾತರಿಯಾಗಿ ಈ ರೀತಿಯ ಕರಾರು ಪತ್ರಗಳನ್ನು ಬರೆಸಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ಬೀರಪ್ಪನ

ಜಮೀನನ್ನು ಒಡೆದುಕೊಳ್ಳಬೇಕೆಂದು ಸುಳ್ಳು ಕರಾರು ತಯಾರಿಸಿ, ಸುಳ್ಳು ದಾವೆ ದಾಖಲಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ